RNU AIR DHARWAD

OCTOBER 06, 2025

AKASHAVANI - DHARWAD

PRADESH SAMACHARA (KANNADA) 12 PM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ನಾಡಿನ ಹಿರಿಮೆ, ಪರಂಪರೆಯ ದ್ಯೋತಕ ಹಾಗೂ ಎಲ್ಲ ಕಲೆಗಳ ತಾಯಿ, ಜಾನಪದ. ಕನ್ನಡ ಜಾನಪದ ಸಾಹಿತ್ಯದ ಸಂರಕ್ಷಣೆ ಹಾಗೂ ಪ್ರಚಾರಕ್ಕೆ, ರಾಜ್ಯ ಸರ್ಕಾರ ವಿಶೇಷ ಅನುದಾನ ಒದಗಿಸಲಿದೆ ಎಂದು, ಬಾಗಲಕೋಟೆ ಜಿಲ್ಲೆ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪೂರ ಹೇಳಿದ್ದಾರೆ. ಲೋಕಾಪೂರದಲ್ಲಿ, ಮುಧೋಳ ತಾಲೂಕು, ಪ್ರಥಮ ಕನ್ನಡ ಜಾನಪದ ಮಹಿಳಾ ಸಮ್ಮೇಳನದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. ಜನಪದರು ಹಾಗೂ ಜನಪದ ಸಾಹಿತ್ಯ, ಮಹಿಳಾ ಕೇಂದ್ರೀತ. ಮಹಿಳೆಯರ ಸಬಲೀಕರಣಕ್ಕೆ ಅಪಾರ ಕೊಡುಗೆ ನೀಡಿದೆ. ಗ್ರಾಮೀಣ ಸೊಗಡಿನ, ನೆಲಮೂಲ ಜ್ಞಾನದ ಜಾನಪದ ಕಲೆ, ಯುವಜನರನ್ನು ತಲುಪಬೇಕಿದೆ, ಎಂದರು.

<><><>

ರಾಜ್ಯದ ಜನತೆಗೆ ಉತ್ತಮ ಹಾಗೂ ಸುಲಭ ಸೇವೆ ಕಲ್ಪಿಸುವ ಉದ್ದೇಶದಿಂದ ಸರ್ಕಾರವು, ಶೀಘ್ರದಲ್ಲಿ ಇ–ಖಾತಾ ಅರ್ಜಿಗೆ, ಮೊಬೈಲ್ ಆಪ್ ಬಿಡುಗಡೆ ಮಾಡಲಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಹೇಳಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ಪ್ರಸ್ತುತ ದಿನಕ್ಕೆ 3 ಸಾವಿರದಿಂದ 4 ಸಾವಿರ ಅರ್ಜಿಗಳು ವಿಲೇವಾರಿಯಾಗುತ್ತಿವೆ, ಮೊಬೈಲ್ ಆಪ್ ಮೂಲಕ ಅರ್ಜಿಗಳ ವಿಲೇವಾರಿ ಪ್ರಕ್ರಿಯೆಯು ಮತ್ತಷ್ಟು ವೇಗ ಪಡೆಯಲಿದೆ ಎಂದಿದ್ದಾರೆ.

<><><>

ರಾಯಚೂರು ಜಿಲ್ಲೆಯ, ಕೆರೆಗಳ ಸಂರಕ್ಷಣೆ ಹಾಗೂ ಅಂತರ್ಜಲ ವೃದ್ಧಿಗಾಗಿ, ವೈಜ್ಞಾನಿಕ ಯೋಜನೆಗಳನ್ನು, ಸಣ್ಣ ನೀರಾವರಿ ಇಲಾಖೆ ರೂಪಿಸಿ, ಅನುಷ್ಠಾನಗೊಳಿಸಿದೆ ಎಂದು, ಸಚಿವ ಎನ್.ಎಸ್. ಬೋಸರಾಜು, ತಿಳಿಸಿದ್ದಾರೆ. ಗದ್ವಾಲ್ ರಸ್ತೆಯ, ತಾಯಮ್ಮ ಕೆರೆಯನ್ನು, 1 ಕೋಟಿ 50 ಲಕ್ಷ ರೂಪಾಯಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸುವ ಕಾಮಗಾರಿಗೆ ಸಚಿವರು ಚಾಲನೆ ನೀಡಿ, ಮಾತನಾಡಿದರು. ಕುಡಿಯುವ ನೀರು, ಕೃಷಿಗಾಗಿ, ರೈತರು ಕೆರೆಗಳ ಮೇಲೆ, ಅವಲಂಬಿತರು. ಜಲಚರಗಳು, ಪ್ರಾಣಿ, ಪಕ್ಷಿ ಸಂಕುಲಕ್ಕೆ ಜೀವದಾಯಿ. ಕೆರೆಗಳು, ಅಂತರ್ಜಲ ವೃದ್ಧಿಸಿ, ಜಲ ಮೂಲಗಳನ್ನು ಸುಧೃಢಗೊಳಿಸಿ, ಪರಿಸರ ಆರೋಗ್ಯ ಕಾಪಾಡುತ್ತವೆ. ಕೆರೆಗಳ ಒತ್ತುವರಿ ತೆರವು ಹಾಗೂ ಗುಣಮಟ್ಟದ ಕಾಮಗಾರಿಗೆ ತಾವು ಆದ್ಯತೆ ನೀಡಿದ್ದಾಗಿ, ಸಚಿವ ಬೋಸರಾಜು ನುಡಿದರು.

<><><>

ಕೊಪ್ಪಳ ನಗರದ, ಗಂಗಾವತಿ ರಸ್ತೆಯ, ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಕಿಮ್ಸ್), 450 ಹಾಸಿಗೆ ಸಾಮರ್ಥ್ಯದ, ಬೋಧಕ ಆಸ್ಪತ್ರೆಯ ನೂತನ ಕಟ್ಟಡ ಹಾಗೂ ಧರ್ಮಶಾಲಾ ಕಟ್ಟಡವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಉದ್ಘಾಟಿಸಲಿದ್ದಾರೆ. ಇದೇ ಸಂದರ್ಭ ಸೂಪರ್ ಸ್ಪೆ ಾಲಿಟಿ ಆಸ್ಪತ್ರೆ ಕಟ್ಟಡ ನಿರ್ಮಾಣ ಕಾಮಗಾರಿಗೆ ಅವರು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಕೊಪ್ಪಳದಲ್ಲಿ ಆಯೋಜಿತ, ವಿವಿಧ ಯೋಜನೆಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಶಾಸಕ ರಾಘವೇಂದ್ರ ಹಿಟ್ನಾಳ..

<><><>

ಧ್ವನಿ: ರಾಘವೇಂದ್ರ ಹಿಟ್ನಾಳ 35 ಸೆಕೆಂದುಗಳು

<><><>

ಅನ್ನ ಭಾಗ್ಯ, ಗೃಹ ಜ್ಯೋತಿ, ಗೃಹ ಲಕ್ಷ್ಮೀ, ಸ್ತ್ರೀ ಶಕ್ತಿ ಹಾಗೂ ಯುವ ನಿಧಿ ಯೋಜನೆಗಳಿಗಾಗಿ, ವಾರ್ಷಿಕ 60 ಸಾವಿರ ಕೋಟಿ ರೂಪಾಯಿ ವ್ಯಯಿಸಲಾಗುತ್ತಿದೆ; ಪಂಚ ಖಾತ್ರಿ ಯೋಜನೆಗಳಿಂದ, ಜನರ ಜೀವನ ಹಾಗೂ ಆರ್ಥಿಕ ಮಟ್ಟದಲ್ಲಿ ಸಾಕಷ್ಟು ಸುಧಾರಣೆಗಳಾಗಿವೆ ಎಂದು, ಕಾರ್ಮಿಕ ಖಾತೆ ಸಚಿವ ಸಂತೋ ್ ಲಾಡ ತಿಳಿಸಿದ್ದಾರೆ. ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ದೇವರ ಗುಡಿಹಾಳ ರಸ್ತೆಯ, ವಿಶಾಲ ನಗರದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ, ಅರ್ಹ ಫಲಾನುಭವಿಗಳಿಗೆ ಸಲಕರಣೆ ವಿತರಿಸಿ, ಅವರು ಮಾತನಾಡಿದರು. ಗ್ಯಾರಂಟಿ ಯೋಜನೆಗಳಿಗೆ, ರಾಜ್ಯ ಸರ್ಕಾರ ಖರ್ಚು ಮಾಡುತ್ತಿರುವ, 60 ಸಾವಿರ ಕೋಟಿ ರೂಪಾಯಿ, ನೇರವಾಗಿ ಜನರನ್ನು ತಲುಪುತ್ತಿದೆ. ನಿರೀಕ್ಷೆಗೂ ಮೀರಿ ಯೋಜನೆಗಳು ಯಶಸ್ವಿಯಾಗಿವೆ. ಇಡೀ ದೇಶಕ್ಕೆ ಮಾದರಿಯಾಗಿವೆ ಎಂದರು.

<><><>

ಫಿಟ್ ಇಂಡಿಯಾ ಸ್ವಚ್ಛತಾ ಫ್ರೀಡಂ ರನ್ 6.0, ಅಭಿಯಾನದ ಭಾಗವಾಗಿ, ಬೆಂಗಳೂರು, ಬನಶಂಕರಿ, 2 ನೇ ಹಂತದ ಬೃಂದಾವನ ಉದ್ಯಾನವನದಲ್ಲಿ, ಹಿರಿಯ ನಾಗರಿಕರಿಗಾಗಿ ಫಿಟ್ನೆಸ್ ಶಿಬಿರ ಆಯೋಜಿಸಲಾಯಿತು. ಸಮತೋಲನ ಆಹಾರ, ಫಿಸಿಯೋಥೆರಪಿ ಹಾಗೂ ಪೋಷಣೆ ಕುರಿತು ಮಾಹಿತಿ ನೀಡಿ, ವೈಜ್ಞಾನಿಕ ವಿಧಾನಗಳ ಮೂಲಕ ತರಬೇತಿ ನೀಡಲಾಯಿತು. ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿರುವ, ಸಂಸದ ತೇಜಸ್ವಿ ಸೂರ್ಯ, ಬೆಂಗಳೂರು ದಕ್ಷಿಣದ ವಿವಿಧೆಡೆಗಳಲ್ಲಿ, ಇಂತಹ ಶಿಬಿರಗಳನ್ನು ಆಯೋಜಿಸುವ ಉದ್ದೇಶವಿರಿಸಲಾಗಿದೆ ಎಂದಿದ್ದಾರೆ.

<><><>

ಶರದ ಹುಣ್ಣಿಮೆಯ ಶುಭ ದಿನವಾದ ಇಂದು, ನಾಡಿನ ಜನತೆಗೆ ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳ ಖಾತೆ ಸಚಿವ ಪ್ರಲ್ಹಾದ್ ಜೋಶಿ ಶುಭಾಶಯಗಳನ್ನು ಕೋರಿದ್ದಾರೆ. ಶರದ ಹುಣ್ಣಿಮೆಯ ಬೆಳದಿಂಗಳು, ಎಲ್ಲರ ಹೃದಯಗಳಲ್ಲಿ ಧನಾತ್ಮಕತೆ ಮೂಡಿಸಿ, ಉತ್ತಮ ಆರೋಗ್ಯ ಹಾಗೂ ಆಧ್ಯಾತ್ಮಿಕ ಸಾಮರಸ್ಯವನ್ನು ಕರುಣಿಸಲಿ ಎಂದು ತಮ್ಮ ಎಕ್ಸ್ ಖಾತೆ ಮೂಲಕ ಹಾರೈಸಿದ್ದಾರೆ.

<><><>

ಚಿಕ್ಕಬಳ್ಳಾಪುರ ಜಿಲ್ಲೆ, ಗ್ರಾಮ ಪಂಚಾಯಿತಿಗಳ ಕರ ಆಕರಣೆಯಲ್ಲಿ, ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿದೆ. 157 ಗ್ರಾಮ ಪಂಚಾಯಿತಿಗಳಿಂದ, ನಿಗದಿತ ತೆರಿಗೆ ಸಂಗ್ರಹ ಗುರಿ, 29 ಕೋಟಿ ರೂಪಾಯಿಗಳ ಪೈಕಿ, 16 ಕೋಟಿ 29 ಲಕ್ಷ ರೂಪಾಯಿ ಸಂಗ್ರಹಿಸಿ, ಚಿಕ್ಕಬಳ್ಳಾಪುರ ಜಿಲ್ಲೆ ಗಮನ ಸೆಳೆದಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>